# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 539 |
| ಸದಸ್ಯರ ಹೆಸರು | ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 13-12-2018 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>ಅ) ರಾಜ್ಯದ ಪ್ರಾಥಮಿಕ, ಹಿರಿಯ ಪ್ರಾಥಮಿಕ, ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಂದ ಸಂಗ್ರಹವಾಗುವ ಕ್ರೀಡಾ ಶುಲ್ಕ ಎಷ್ಟು; ಆರ್.ಟಿ.ಇ. ಅಡಿ ಕ್ರೀಡಾ ಶುಲ್ಕ ವಿಧಿಸಲು ಅವಕಾಶವಿದೆಯೇ;</td><td>ಆರನೇ ತರಗತಿಯಿಂದ ಏಳನೇ ತರಗತಿವರೆಗೆ ಪ್ರತಿ ವಿದ್ಯಾರ್ಥಿಗೆ ರೂ.15/- ರಂತೆ ಹಾಗೂ ಎಂಟನೇ ತರಗತಿಯಿಂದ ಹತ್ತನೇ ತರಗತಿವರೆಗೆ ಪ್ರತಿ ವಿದ್ಯಾರ್ಥಿಗೆ ರೂ.25/- ರಂತೆ ಕ್ರೀಡಾ ಶುಲ್ಕವನ್ನು ಮತ್ತು ಪದವಿ ಪೂರ್ವದ ತರಗತಿಗಳ ವಿದ್ಯಾರ್ಥಿಗಳಿಗೆ ರೂ.84/- ಕ್ರೀಡಾ ಶುಲ್ಕವನ್ನು ಹಾಗೂ ಪದವಿ ಪೂರ್ವ ತರಗತಿಗಳ ವಿದ್ಯಾರ್ಥಿಗಳಿಗೆ ವಿಶೇಷ ಕ್ರೀಡಾ ಶುಲ್ಕವಾಗಿ ರೂ.34/-ನ್ನು ಸಂಗ್ರಹಿಸಲಾಗುತ್ತಿದ್ದು, ಆರನೇ ತರಗತಿಯಿಂದ ಹತ್ತನೇ ತರಗತಿವರೆಗೆ ಮತ್ತು ಪದವಿಪೂರ್ವ ತರಗತಿಗಳ ವಿದ್ಯಾರ್ಥಿನಿಯರಿಗೆ ಕ್ರೀಡಾ ಶುಲ್ಕದಿಂದ ವಿನಾಯಿತಿ ನೀಡಲಾಗಿರುತ್ತದೆ.<br>ಈ ಕ್ರೀಡಾ ಶುಲ್ಕವನ್ನು ಆಯಾ ಶಾಲೆಗಳಲ್ಲಿಯೇ ಸಂಗ್ರಹಿಸಲಾಗುತ್ತದೆ. ಆರ್.ಟಿ.ಇ. ಅಡಿಯಲ್ಲಿ ಕ್ರೀಡಾ ಶುಲ್ಕವನ್ನು ವಿಧಿಸಲು ಅವಕಾಶವಿರುವುದಿಲ್ಲ.</td></tr>
<tr><td>ಆ) ಸರ್ಕಾರದಿಂದ ಶಾಲಾ-ಕಾಲೇಜು ವಲಯ, ತಾಲ್ಲೂಕು, ಜಿಲ್ಲೆ, ವಿಭಾಗ, ರಾಜ್ಯ, ರಾಷ್ಟ್ರ ಮಟ್ಟದ ಕ್ರೀಡಾ ಚಟುವಟಿಕೆಗಳಿಗೆ ಒದಗಿಸಲಾಗುವ ಅನುದಾನ ಎಷ್ಟು;</td><td>2018-19ನೇ ಸಾಲಿನಲ್ಲಿ ಹೋಬಳಿ ಮಟ್ಟ, ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟ, ರಾಜ್ಯ ಮಟ್ಟ ಮತ್ತು ರಾಷ್ಟ್ರ ಮಟ್ಟದ ಕ್ರೀಡಾ ಕೂಟಕ್ಕೆ ಸರ್ಕಾರದಿಂದ ರೂ.333.32 ಲಕ್ಷ ರೂಪಾಯಿಗಳ ಅನುದಾನವನ್ನು ಒದಗಿಸಲಾಗಿದೆ.<br>ಪದವಿಪೂರ್ವ ಶಿಕ್ಷಣ ಇಲಾಖೆಯಿಂದ 2017-18ನೇ ಸಾಲಿಗೆ ರೂ. 2,13,60,000/-ಗಳನ್ನು ವಿಶೇಷ ಕ್ರೀಡಾ ನಿಧಿಯಿಂದ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.</td></tr>
<tr><td>ಇ) ರಾಜ್ಯದಲ್ಲಿರುವ ಪ್ರಾಥಮಿಕ, ಹಿರಿಯ ಪ್ರಾಥಮಿಕ, ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು; (ಸರ್ಕಾರಿ ಹಾಗೂ ಅನುದಾನಿತ ಶಾಲಾ ಕಾಲೇಜುವಾರು ವಿವರ ನೀಡುವುದು).</td><td>
<table>
<tr><th></th><th>ಶಾಲೆಗಳ ಸಂಖ್ಯೆ</th><th>ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ದೈಹಿಕ ಶಿಕ್ಷಣ ಶಿಕ್ಷಕರ ಸಂಖ್ಯೆ</th></tr>
<tr><td>ಸರ್ಕಾರಿ ಪ್ರಾಥಮಿಕ ಶಾಲೆ</td><td>43895</td><td>5815</td></tr>
<tr><td>ಅನುದಾನಿತ ಪ್ರಾಥಮಿಕ ಶಾಲೆ</td><td>1627</td><td>533</td></tr>
<tr><td>ಸರ್ಕಾರಿ ಪ್ರೌಢ ಶಾಲೆ</td><td>4676</td><td>4946</td></tr>
<tr><td>ಅನುದಾನಿತ ಪ್ರೌಢ ಶಾಲೆ</td><td>3812</td><td>3380</td></tr>
<tr><td>ಸರ್ಕಾರಿ ಪದವಿಪೂರ್ವ ಕಾಲೇಜು</td><td>1231</td><td>-</td></tr>
<tr><td>ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜು</td><td>797</td><td>300</td></tr>
</table>
</td></tr>
</table>

| | |
|---|---|
| ಈ) ಡಾ: ವೈದ್ಯನಾಥನ್ ವರದಿಯ ಶಿಫಾರಸ್ಸಿನ ಹಿನ್ನೆಲೆಯಲ್ಲಿ ದೈಹಿಕ ಶಿಕ್ಷಕರ ಸಿ & ಆರ್ ಕುರಿತು ಸರ್ಕಾರ ತೆಗೆದುಕೊಂಡ ಕ್ರಮ ಏನು: ವರದಿಯ ಮುಖ್ಯಾಂಶಗಳೇನು: ಶಿಫಾರಸ್ಸುಗಳೇನು: ಆ ವರದಿಯ ಯಾವ ಶಿಫಾರಸ್ಸುಗಳನ್ನು ಅಳವಡಿಸಿಕೊಳ್ಳಲಾಗಿದೆ/ ಜಾರಿಗೊಳಿಸಲಾಗಿದೆ: ಯಾವಾಗ ಅಳವಡಿಸಿಕೊಳ್ಳಲಾಗಿದೆ/ಜಾರಿಗೊಳಿಸಲಾಗಿದೆ: ಬಾಕಿ ಉಳಿದ ಶಿಫಾರಸ್ಸುಗಳನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು? | ಡಾ. ವೈದ್ಯನಾಥನ್ ವರದಿಯ ಶಿಫಾರಸ್ಸಿನ ಹಿನ್ನೆಲೆಯಲ್ಲಿ ದೈಹಿಕ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಕುರಿತು ಸರ್ಕಾರದ ಆದೇಶ ಸಂಖ್ಯೆ: ಇಡಿ 290 ಎಸ್‌ಎಲ್‌ಬಿ 2006 ದಿನಾಂಕ:06-08-2007ರಲ್ಲಿ ಅನುಮೋದನೆ ನೀಡಿದ್ದು, ಸದರಿ ವರದಿಯ ಹದಿಮೂರು ಅಂಶಗಳನ್ನು ಈಗಾಗಲೇ ಜಾರಿಗೊಳಿಸಲಾಗಿದ್ದು, ಇನ್ನುಳಿದ ಹದಿನಾಲ್ಕನೇ ಅಂಶವಾದ ದೈಹಿಕ ಶಿಕ್ಷಣ ಶಿಕ್ಷಕರುಗಳ ಪದನಾಮವನ್ನು 'ಸಹ ಶಿಕ್ಷಕರು' (ದೈಹಿಕ ಶಿಕ್ಷಣ) ಎಂದು ಬದಲಾವಣೆ ಮಾಡುವ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಮಗ್ರವಾಗಿ ತಿದ್ದುಪಡಿ ತರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ. |

**692 ಪಿಜಿಸಿ 2018**

**(ಹೆಚ್.ಡಿ.ಕುಮಾರಸ್ವಾಮಿ)**
**ಮುಖ್ಯಮಂತ್ರಿ**